ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (245) 103
ಸದಸ್ಯರ ಹೆಸರು : ಶ್ರೀ ಲಾಲಾಜಿ ಆರ್ .ಮೆಂಡನ್ (ಕಾಪು)
ಉತ್ತರಿಸಬೇಕಾದ ಸಚಿವರು : (ಶ್ರೀ ಆನಂದ ವಸಂತ ಅಸ್ನೋಟಿಕರ)
ಮೀನುಗಾರಿಕೆ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕಾಪು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಹೆಜಮಾಡಿ ಮೀನುಗಾರಿಕಾ ಬಂದರು ಆರಂಬಿಕ ಕೆಲಸ ಕಾರ್ಯ ಎಂದಿನಿಂದ ಪ್ರಾರಂಭವಾಗಿದೆ.	ಹೆಜಮಾಡಿ ಕೋಡಿ ಮೀನುಗಾರಿಕಾ ಇಳೆದಾಣ ಕಾರ್ಯವನ್ನು ದಿನಾಂಕ : 17/04/1995ರಂದು ಪ್ರಾರಂಭಿಸಲಾಗಿರುತ್ತದೆ.
ಆ)	ಇದುವರೆಗೆ ಈ ಬಂದರಿಗೆ ವಿನಿಯೋಗವಾಗಿರುವ ಹಣವೆಷ್ಟು?	ಹೆಜಮಾಡಿ ಕೋಡಿ ಮೀನುಗಾರಿಕಾ ಇಳಿದಾಣ ಕೇಂದ್ರದ ನಿರ್ಮಾಣಕ್ಕೆ ಅಗತ್ಯವಾದ ಭೂಸ್ವಾಧೀನಕ್ಕೆ ರೂ.45.94 ಲಕ್ಷ ಹಾಗೂ ಕಾಮಗಾರಿಗಳಿಗೆ ರೂ.89.61 ಲಕ್ಷ ಸೇರಿ ಒಟ್ಟು ರೂ.135.55 ಲಕ್ಷ ಖರ್ಚಾಗಿರುತ್ತದೆ.
ಇ)	ಮಂಗಳೂರು ಹಾಗೂ ಮಲ್ಪೆ ಬಂದರಿನ ಮಧ್ಯೆ ಅತೀ ಅಗತ್ಯವಿರುವ ಹೆಜಮಾಡಿ ಮೀನಗಾರಿಕಾ ಬಂದರಿನ ನೀಲಿ ನಕಾಶೆ ತಯಾರಾಗಿದೆಯೆ? ಹಾಗಿದ್ದಲ್ಲಿ. ಅದರ ಮೌಲ್ಯವೆಷ್ಟು, ಯಾವಾಗ ಪ್ರಾರಂಭಿಸಲಾಗುವುದು?	ಹೆಜಮಾಡಿ ಮೀನುಗಾರಿಕಾ ಬಂದರಿನ ನೀಲಿ ನಕಾಶೆ ತಯಾರಿಸುವುದಿಲ್ಲ. ಆದರೆ. ಬಂದರಿನಲ್ಲಿ ಹೂಲು ತುಂಬಿಕೊಂಡು ಬಂದರನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಲು ಸಾಧ್ಯವಾಗದೇ ಇದ್ದದರಿಂದ ಎನ್.ಐ.ಟಿ.ಕೆ. ಸೂರತ್ಕಲ್ ತಾಂತ್ರಿಕ ತಜ್ಞರ ಅಧ್ಯಯನ ಹಾಗೂ ಸಿ.ಡಬ್ಲ್ಯು.ಪಿ.ಆರ್.ಎಸ್. ಪುಣೆ ತಾಂತ್ರಿಕ ತಜ್ಞರ ಅಧ್ಯಯನ ಮತ್ತು ವಿನ್ಯಾಸದ ಆದಾರದಲ್ಲಿ ಈ ಬಂದರಿನಲ್ಲಿ 2 ಬ್ರೇಕ್ ವಾಟರ್ ಮತ್ತು ಹೂಳೆತ್ತುವ ಕಾಮಗಾರಿಗೊಸ್ಕರ ರೂ.87.00 ಕೋಟಿಗಳ ಅಂದಾಜನ್ನು ತಯಾರಿಸಲಾಗಿತ್ತು. ಲೋಕೋಪಯೋಗಿ ಇಲಾಖೆಯ ಅಭಿಪ್ರಾಯದ ಮೇರೆಗೆ ಈ ಬಂದರಿನಲ್ಲಿ ಅಗತ್ಯವಿರುವ ಇತರ ಪೂರಕ ಕಾಮಗಾರಿಗಳನ್ನು ಸೇರಿಸಿಕೊಂಡು ಈ ಯೋಜನೆಯನ್ನು ಹೆಜಮಾಡಿ ಕೋಡಿ ಮೀನುಗಾರಿಕೆ ತಂಗುದಾಣದ 2ನೇ ಹಂತದ ಕಾಮಗಾರಿಯೆಂದು ಪರಿಗಣಿಸಿ ಪರಿಷ್ಕೃತ ಅಂದಾಜನ್ನು ತಯಾರಿಸಲು ಬಂದರು ಇಲಾಖೆಯನ್ನು ಕೋರಲಾಗಿದೆ. ಅಲ್ಲದೆ ಇಳಿದಾಣ ಕೇಂದ್ರದಲ್ಲಿ ಹೂಳೆತ್ತುವ ಕಾಮಗಾರಿಗೋಸ್ಕರವೇ ರೂ.200.00 ಲಕ್ಷಗಳ ಅಂದಾಜು ವೆಚ್ಚಕ್ಕೆ ಆಡಳಿತ ಅನುಮೋದನೆ ನೀಡಿದ್ದು. ಹೂಳೆತ್ತೆಲು ಟೆಂಡರ್

		ಕರೆದು ಗುತ್ತಿಗೆದಾರರನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯನ್ನು ಶೀಘ್ರ ಪ್ರಾರಂಭಿಸಲಾಗುವುದು.
ಈ)	ಬಂದರು ವಿಕೇಂದ್ರಿಕರಣ ಅಭಿವೃದ್ದಿ ದೃಷ್ಟಿಯಿಂದ ಮಾರಕವಾಗಿದ್ದು. ಎಷ್ಟು ಫಲಾನುಭವಿಗಳಿಗೆ ಇದರ ಪ್ರಯೋಜನ ದೊರೆತಂತಾಗುವುದು?	ಬಂದರು ವಿಕೇಂದ್ರಿಕರಣ ಅಭಿವೃದ್ದಿ ದೃಷ್ಟಿಯಿಂದ ಪೂರಕವಾಗಿರುತ್ತದೆ. ಪ್ರಸಕ್ತ ಯೋಜನೆಯನ್ನು ಕಾರ್ಯಗತಗೊಳಿಸಿದಲ್ಲಿ ಅಂದಾಜು 1000 ಫಲಾನುಭವಿಗಳಿಗೆ ಪ್ರಯೋಜನವಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (155) 104
ಸದಸ್ಯರ ಹೆಸರು : ಶ್ರೀ ನಾಯ್ಡು ಜೆ.ಡಿ. (ಭಟ್ಕಳ)
ಉತ್ತರಿಸುವ ಸಚಿವರು : ಶ್ರೀ ಜೆ. ಕೃಷ್ಣ ಪಾಲೇಮಾರ್
ಮಾನ್ಯ ಬಂದರು. ಒಳನಾಡು ಜಲಸಾರಿಗೆ ಮತ್ತು ಪರಿಸರ ಹಾಗೂ. ಜೀವಿಶಾಸ್ತ್ರ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಭಟ್ಕಳ ವಿಧಾನಸಭಾ ವ್ಯಾಪ್ತಿಯ ಭಟ್ಕಳ ತಾಲ್ಲೂಕಿನ ಗೋಟೆಣ. ಭೇಳ್ಕೆ. ತೆಲಗೋಡ ತೆಂಗಿನ ಗುಂಡಿ. ಹೇಬ್ಬೆ. ಕ್ಯಾರಣೆ ಮತ್ತು ಮುರುಡೇಶ್ವರ ಹಾಗೂ ಹೊನ್ನಾವರ ತಾಲ್ಲೂಕಿನ ಮಂದೆಯ ನಾಕುದಾಮೊಹಲ್ಲಾ ಮಡಿ ಹಾಗೂ ಕಾಸರಗೋಡಿನಲ್ಲಿ ಸಮುದ್ರದ ನೀರು ಒಳನುಗ್ಗಿ ಆಸ್ತಿ–ಪಾಸ್ತಿ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು
ಆ)	ಹಾಗಿದ್ದಲ್ಲಿ ಎಂದಿನಿಂದ ಸಮುದ್ರ ತಡೆಗೋಡೆ ಕಟ್ಟಲಾಗುವುದು?	ಮಳೆಗಾಲದಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸಿದ ಪ್ರದೇಶಗಳಲ್ಲಿ ತುರ್ತು ಸಂರಕ್ಷಣಾ ಕ್ರಮವಾಗಿ ಜಿಲ್ಲಾಧಿಕಾರಿಯವರು ನೀಡುವ ಪ್ರಾಕೃತಿಕ ವಿಕೋಪ ಪರಿಹಾರ ನಿಧಿಯಡಿ ತಾತ್ಕಾಲಿಕ ತುರ್ತು ಸಂರಕ್ಷಣೆ ಕೈಗೊಳ್ಳಲಾಗುತ್ತಿದೆ. ಪದೇ ಪದೇ ತೀವ್ರ ಸಮುದ್ರ ಕೊರೆತ ಉಂಟಾಗುವ ಭಟ್ಕಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಗೋರಟೆ. ಬೆಳಕೆ. ಮುಂಡಳ್ಳಿ. ತಲಗೋಡು. ಜಾಲಿ. ಹೊನ್ನಗದ್ದೆ. ಅಳ್ವಕೋಡಿ. ಸಣ್ಣಬಾವಿ. ಕಾಯ್ಕಿಣಿ. ಮತದಹಿತ್ಲು. ದೇವಗಿರಿ.